ಓ.ಎಸ್.188/2021 ಡಿ.ಡಬ್ಲೂ-1
*ಮರಿಯಪ್ಪ ತಂದೆ ಹುಲಗಪ್ಪ*

ದಿ. 05-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು :-ಶ್ರೀ ಆರ್.ಎಂ.ವಾಯ್ ವಕೀಲರಿಂದ**

ಸರ್ವೇ ನಂ: 68 ಹಿಸ್ಸಾ 3 ಜಮೀನು ಸರಕಾರಕ್ಕೆ ಸೇರಿರುತ್ತದೆ. ಸರ್ವೇ ನಂ: 68 ರ 7 ಎಕರೆ 25 ಗುಂಟೆ ವಾದಿಗೆ ಸಂಬಂಧಿಸಿದೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಸಂಗಮ್ಮಳ ಹೊಲ ಇದೆ ಎಂದರೆ ಸರಿ. ಸಂಗಮ್ಮಳಿಗೆ 1 ಎಕರೆ 16 ಗುಂಟೆ ಜಮೀನು ಇದ್ದು ಅದನ್ನು ಡಬಲ್ ಮಾಡಿಕೊಂಡಿರುತ್ತಾರೆ. ಸಂಗಮ್ಮಳು ಅರಣ್ಯ ಇಲಾಖೆಯವರ ಹಾಗೂ ಸಹಾಯಕ ಭೂಸೇನಾ ಮತ್ತು ಆನೆಹೊಸೂರ ಪಂಚಾಯತಿ ವಿರುದ್ಧ ಕೇಸು ಹಾಕಿದ್ದು 2 ಎಕರೆ 39 ಗುಂಟೆಗೆ ಓ.ಎಸ್ ನಂ: 148/2000 ರಲ್ಲಿ ಡಿಕ್ರಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅಮರೇಶ ನಾಯ್ಕ 110 ಪ್ಲಾಟಗಳಿಗೆ ಹಕ್ಕು ಪತ್ರ ಕೊಟ್ಟಿರುತ್ತಾರೆ. ಅದರಂತೆ ನನಗೂ 2 ಪ್ಲಾಟ ಹಕ್ಕುಪತ್ರ ಕೊಟ್ಟಿರುತ್ತಾರೆ. ಸದರಿ ಹಕ್ಕುಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನನಗೆ ಹಕ್ಕುಪತ್ರಗಳನ್ನು ಯಾವ ಸರ್ವೆ ನಂಬರಿನಲ್ಲಿ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಮನೆಯನ್ನು ಯಾವ ಸರ್ವೆ ನಂಬರಿನಲ್ಲಿ ಕಟ್ಟಿರುತ್ತೇನೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಸರಕಾರಿ ಜಾಗದಲ್ಲಿ ಕಟ್ಟಿರುತ್ತೇನೆ.

2. ನಾನು ರಾಜೀವಗಾಂಧಿ ವಸತಿ ನಿಗಮ ವತಿಯಿಂದ ಫಲಾನುಭವಿಯಾಗಿ ಆಯ್ಕೆಯಾಗಿದೆ ಎಂದು ಬರೆಸಿರುತ್ತೇನೆ. ಮನೆಯ ಖಾತಾ ನಕಲುಗಳು ಇರುತ್ತವೆ. ಅಮರೇಶ ನಾಯ್ಕ ಇತನು ಸೃಷ್ಟಿ ಮಾಡಿ ಹಕ್ಕುಪತ್ರಗಳನ್ನು ನೀಡಿರುತ್ತಾನೆ ಎಂದರೆ ಸರಿಯಲ್ಲ. ಓಟಿಗಾಗಿ ಅವರು ಸುಳ್ಳು ಹಕ್ಕುಪತ್ರಗಳು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅವುಗಳನ್ನು ಹಕ್ಕುಪತ್ರಗಳು ಎಂದು ತಿಳಿದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಅವರಿಗೆ ತಲಾ ರೂ. 5,000/- ರಂತೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ: 63/2 ಮತ್ತು ಸರ್ವೆ ನಂ: 63/3 ಅರಣ್ಯ ಇಲಾಖೆಗೆ ಹೋಗಿರುತ್ತವೆ ಎಂದರೆ ಸರಿಯಲ್ಲ. 1982-83 ರಲ್ಲಿ ತಹಶೀಲ್ದಾರ ರವರು ಸ.ನಂ:63 ಹಿಸ್ಸಾ 1 ನ್ನು ಅರಣ್ಯ ಇಲಾಖೆಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಪತ್ರದೊಂದಿಗೆ ಹಾತ್ ನಕಾಶೆ ಹಾಕಿರುತ್ತೇವೆ ಎಂದರೆ ಸರಿ. ಪೂರ್ವಕ್ಕೆ ಗುಡ್ಡ ಇದೆ ಎಂದರೆ ಸರಿ. ಗುಡ್ಡ ಯಾವ ಸರ್ವೆ ನಂಬರಿನಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ: 68 ರ ಪೂರ್ವಕ್ಕೆ ವಾದಿಯ ತಾಯಿಯ ಜಮೀನು ಇದೆ ಎಂದರೆ

ಸರಿಯಲ್ಲ. ನಾನು ವಾದಿಯ ಜಮೀನಲ್ಲಿ ಪೂರ್ವಕ್ಕೆ ಮನೆ ಕಟ್ಟಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಹಾತ್ ನಕಾಶೆಯಲ್ಲಿ ಗುಡ್ಡ ಇದೆ ಎಂದು ಸುಳ್ಳು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ತಹಶೀಲ್ದಾರ ಕಚೇರಿಯಲ್ಲಿ ಆನೆ ಹೊಸುರ ಗ್ರಾಮದಲ್ಲಿ ಯಾವುದೇ ಹಕ್ಕುಪತ್ರಗಳನ್ನು ಕೊಟ್ಟಿಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸರಕಾರದಿಂದ ನಮಗೆ ಯಾವುದೇ ಜಮೀನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯ ತಂದೆ ಸಂಗಪ್ಪ ಜಾಗಕ್ಕೆ ರೂ.500/- ತೆಗೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಹಕ್ಕುಪತ್ರ ನಕಲು ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅಸಲು ಪ್ರತಿ ಮನೆಯಲ್ಲಿರುತ್ತದೆ. ನಾನು ಪಂಚಾಯತಿಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ರಾಜೀವಗಾಂಧಿ ವಸತಿ ಯೋಜನೆಯನ್ನು ದುರುಪಯೋಗಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಹಾಯಕ ಆಯುಕ್ತರು, ಸರ್ವೆ ನಂ: 63 ರಲ್ಲಿ ಯಾವುದೇ ಮನೆ ಕಟ್ಟಿಸಬಾರದೆಂದು ಪಿಡಿಓ ಆನೆಹೊಸೂರ ರವರಿಗೆ ನೋಟಿಸ್ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಿಡಿಓ ಆನೆಹೊಸೂರ ರವರು ಮನೆ ನಿರ್ಮಾಣವನ್ನು ನಿಲ್ಲಿಸಿರುತ್ತಾರೆಂದು ನೋಟಿಸ್ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಾನು ಕಟ್ಟಿಸುತ್ತಿರುವ ಮನೆ ವಾದಿಗೆ ಸಂಬಂಧ ಇಲ್ಲ. ಮುಖ್ಯ ವಿಚಾರಣೆಯ ಪ್ಯಾರ ನಂ: 2 ರಲ್ಲಿ ಮೂಲ ದಾವಾ ಸಂಖ್ಯೆ 55/14 ಎಂದು ಬರೆಸಿರುತ್ತೇವೆ ಎಂದರೆ ನನಗೆ ನೆನಪಿಲ್ಲ. ಓ.ಎಸ್ ನಂ: 55/14 ರ ವಾದಿ ನನ್ನ ಮೇಲೆ ಹಾಕಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಡಿಕ್ರಿ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರಿಂದಲೆ ಈ ದಾವೆಯನ್ನು ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ವಾದಿಯ ವಿರುದ್ಧ ದೌರ್ಜನ್ಯ ಮಾಡುತ್ತಾ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಹಳೆಯ ವೈಶಮ್ಯದಿಂದ ನಾನು ವಾದಿಯ ಜಮೀನಿನ ಬದುವಿನಲ್ಲಿ ಮನೆ ಕಟ್ಟಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಸರಕಾರ ಯಾವುದೇ ಹಕ್ಕುಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.